


ಗುಂಡ ಒಂದು ದಿನ ಬಸ್ಸಿನಲ್ಲಿ ಊರಿಗೆ ಹೊರಟಿದ್ದ. ಪಕ್ಕದ ಸೀಟಿನಲ್ಲಿ ಒಬ್ಬ ಮಹಿಳೆ ತನ್ನ ಮಗುವಿಗೆ ಜಾಮೂನು ತಿನ್ನಿಸಲು ಯತ್ನಿಸುತ್ತಿದ್ದಳು. ಅದನ್ನು ತಿನ್ನದೆ ಮಗು ಹಟ ಮಾಡುತ್ತಿತ್ತು. ಪಕ್ಕದಲ್ಲೇ ಕೂತಿದ್ದ ಗುಂಡನನ್ನು ನೋಡಿದ ಆ ಮಹಿಳೆ ತನ್ನ ಮಗುವಿಗೆ, 'ನೋಡು ನೀನೀಗ ತಿನ್ನದೇ ಇದ್ರೆ ಜಾಮೂನು ಅನ್ನು ಈ ಅಂಕಲ್‌ಗೆ ಕೊಟ್ಬಿಡ್ತೀನಿ' ಅಂತ ಹೇಳಿದಳು. ಇದೇ ಮಾತನ್ನು ಆ ಮಹಿಳೆ ಮೂರ್‌ನಾಲ್ಕ್ ಸರಿ ಹೇಳ್ತಾನೇ ಇದ್ದಳು. ಇದರಿಂದ ಸಿಟ್ಟಿಗೆದ್ದ ಗುಂಡ, 'ಹಲೋ ಮೇಡಂ ಕೊಡೊ ಹಾಗಿದ್ದರೆ ಬೇಗ ಕೊಟ್ಬಿಡಿ. ಈ ಜಾಮೂನ್ ಮೇಲಿನ ಆಸೆಯಿಂದ ನನ್ ಸ್ಟಾಪ್ ಬಿಟ್ಟು ಐದಾರು ಊರು ಮುಂದೆ ಬಂದಿದ್ದೀನಿ' ಅಂದ.




**ಅತ್ತೆ:** ಮದುವೆ ಮೆರವಣಿಗೆಯಲ್ಲಿ ನಿಮ್ ಸ್ನೇಹಿತರೆಲ್ಲ ತುಂಬಾ ಚೆನ್ನಾಗಿ ಕುಣಿದು ಕುಪ್ಪಳಿಸುತ್ತಿದ್ದಾರಲ್ವಾ?
**ಮದುಮಗ:** ಅತ್ತೆ ಅದಕ್ಕೊಂದು ಕಾರಣವಿದೆ. ವರದಕ್ಷಿಣೆ ಹಣದಿಂದ ನಿಮ್ಮೆಲ್ಲರ ಸಾಲ ತೀರಿಸ್ತೀನಿ ಅಂತ ಅವ್ರಿಗೆಲ್ಲ ಹೇಳಿದ್ದೆ. ಅದ್ಕೆ ಖುಷಿಯಿಂದ ಕುಣಿದು ಕುಪ್ಪಳಿಸ್ತವ್ರೆ.

**ಲೇಡಿ ಡಾಕ್ಟರ್:** ದಿನಾ ಬೆಳಿಗ್ಗೆ ಕ್ಲಿನಿಕ್ ಮುಂದೆ ನಿಂತು ಹೆಂಗಸರನ್ನು ನೋಡ್ತಿಯಲ್ಲ, ನಿಂಗೇನು ನಾಚಿಕೆ ಆಗಲ್ವಾ?
**ಗುಂಡ:** 'ಮಹಿಳೆಯರನ್ನು ನೋಡುವ ಸಮಯ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ' ಅಂತ ನೀವೇ ಬೋರ್ಡ್ ಹಾಕಿದ್ದೀರಿ. ಅದ್ಕೆ ನೋಡ್ತಾ ಇದೀನಿ.

**ತಿಮ್ಮ:** ಶಾಲೆಗಳ ಬಳಿ ನಿಧಾನವಾಗಿ ಚಲಿಸಿ ಎಂಬ ಎಚ್ಚರಿಕೆಯ ಬೋರ್ಡ್ ಫಲಕವಿರುತ್ತೆ. ಆದ್ರೆ ಮಹಿಳಾ ಕಾಲೇಜು ಬಳಿ ಈ ಫಲಕ ಯಾಕಿರುವುದಿಲ್ಲ?
**ಗುಂಡ:** ಮಹಿಳಾ ಕಾಲೇಜು ಬಳಿ ವಾಹನಗಳು ಸಹಜವಾಗಿಯೇ ನಿಧಾನವಾಗಿ ಚಲಿಸುತ್ತವೆ ಅದಕ್ಕೆ.

**ತಿಮ್ಮ:** ಯಾಕಿಂಗೆ ಗುಂಡನನ್ನು ಹೊಡೀತಾ ಇದೀರಾ?
**ಗುಂಡನ ಮಾವ:** 'ನೀನು ಅಪ್ಪ ಆಗ್ತಾ ಇದೀಯಾ' ಅಂತ ವಾಟ್ಸ್‌ಆ್ಯಪ್‌ನಲ್ಲಿ ಮೆಸೇಜ್ ಮಾಡಿದ್ದೆ. ಅದನ್ನು ಈ ಹುಚ್ಚ ಎಲ್ಲರಿಗೂ ಫಾರ್ವರ್ಡ್ ಮಾಡಿದ್ದಾನೆ.

**ಗುಂಡ:** ನನ್ನ ತಪ್ಪುಗಳನ್ನು ನಾನು ಕಂಡುಹಿಡಿಯುವುದು ಹೇಗೆ?
**ತಿಮ್ಮ:** ನಿನ್ನ ಹೆಂಡತಿಯ ಒಂದು ತಪ್ಪನ್ನು ಆಕೆ ಮುಂದೆ ಹೇಳು. ಆಗ ಅವಳು ನಿನ್ನ ಮತ್ತು ನಿನ್ನ ಕುಟುಂಬದವರ ತಪ್ಪುಗಳನ್ನು ಹುಡುಕಿ ಹುಡುಕಿ ಹೇಳ್ತಾಳೆ.

**ತಿಮ್ಮ:** ಮದುವೆಗೂ ಮುಂಚೆ ವಧುವರರು ಪರಸ್ಪರ ಕೈ ಹಿಡಿದಿರುತ್ತಾರೆ ಯಾಕೆ?
**ಗುಂಡ:** ಇಬ್ಬರು ಬಾಕ್ಸರ್‌ಗಳು ಬಾಕ್ಸಿಂಗ್ ಆರಂಭಿಸುವ ಮುಂಚೆ ಪರಸ್ಪರ ಕೈ ಹಿಡಿದುಕೊಳ್ಳುವುದು ಹಿಂದಿನಿಂದಲೂ ನಡೆದು ಬಂದ ರೂಢಿ. ಅದ್ಕೆ ಪರಸ್ಪರ ಕೈ ಹಿಡಿದಿರುತ್ತಾರೆ.

**ರಮೇಶ:** ಹೆಂಡ್ತಿ ಕೈಗೆ ದುಡ್ಡು ಸಿಗಬಾರದು ಅಂದ್ರೆ ಏನು ಮಾಡಬೇಕು?
**ಸುರೇಶ್:** ಆಕೆ ಎಲ್ಲಿ ಹೋಗಲ್ವೋ ಅಲ್ಲಿ ಇಡಬೇಕು.
**ರಮೇಶ್:** ನೀನೆಲ್ಲಿ ಇಡ್ತೀಯಾ?
**ಸುರೇಶ್:** ಅಡುಗೆ ಮನೆಯಲ್ಲಿ.
**ರಮೇಶ್:** ಹಾಗಿದ್ರೆ ಇನ್ಮೇಲೆ ನಾನೇ ಅಡುಗೆ ಮಾಡ್ತೀನಿ.

**ಸುಮಾ:** ರೀ ರಮಾ... ನಂಗೆ 22 ವರ್ಷ ಆದ್ರೂ ಮಕ್ಕಳಾಗಿರಲಿಲ್ಲ ಗೊತ್ತಾ?
**ರಮಾ:** ಹೌದಾ... ಆಮೇಲೆ ನೀನ್ ಏನ್ ಮಾಡ್ದೆ?
**ಸುಮಾ:** 23ನೇ ವರ್ಷದಲ್ಲಿ ನಮ್ಮಪ್ಪ ನಂಗೆ ಮದುವೆ ಮಾಡಿಸಿದ್ರು ಆದಾದ ವರ್ಷಕ್ಕೆ ಗಂಡು ಮಗ ಹುಟ್ದ.

**ಹೆಂಡತಿ:** ನಿಮ್ಮ ಹಳೆ ಶರ್ಟ್ ಅನ್ನು ಕೆಲಸದವನಿಗೆ ಯಾಕೆ ಕೊಟ್ರಿ?
**ಗಂಡ:** ಅದಕ್ಕೇನು ಈಗ?
**ಹೆಂಡತಿ:** ದೊಡ್ಡ ಪ್ರಮಾದವೇ ಆಗಿದೆ ಗೊತ್ತಾ? ಅವನು ಹಾಕಿದ್ದ ಶರ್ಟ್ ನೋಡಿ ಅದು ನೀವೇ ಅಂತ ತಿಳ್ಕೊಂಡು...
**ಗಂಡ:** ನಾನು ಅಂತ ತಿಳ್ಕೊಂಡು...?
**ಹೆಂಡತಿ:** ಹಿಂದಿನಿಂದ ಹೋಗಿ...
**ಗಂಡ:** ಹಿಂದಿನಿಂದ ಹೋಗಿ ತಬ್ಕೊಂಡ್ಯಾ?
**ಹೆಂಡತಿ:** ಇಲ್ಲರಿ ಲಟ್ಟಣಿಗೆಯಿಂದ ಹೊಡೆದುಬಿಟ್ಟೆ.

**ತಂದೆ:** ಅಮ್ಮ ಯಾಕೋ ಸೈಲೆಂಟಾಗಿದ್ದಾಳೆ?
**ಮಗ:** ನಂದೇ ತಪ್ಪು ಅಪ್ಪ. ಅಮ್ಮ ಲಿಪ್‌ಸ್ಟಿಕ್ ಕೇಳಿದ್ರು, ನಾನು ಮಿಸ್ ಆಗಿ ಫೆವಿಕ್ವಿಕ್ ಕೊಟ್ಟೆ.
**ತಂದೆ:** ಹೌದಾ ಮಗನೇ, ಎಂಥಾ ಒಳ್ಳೆ ಕೆಲಸ ಮಾಡ್ದೊ. ನೀನ್ ನೂರು ವರ್ಷ ಬಾಳು.

**ಮೀಡಿಯಾ:** ನೀವು ಯಾವ ಪಾರ್ಟಿಗೆ ಸಪೋರ್ಟ್ ಮಾಡ್ತೀರಾ?
**ಗುಂಡ:** ಬರ್ತಡೇ ಪಾರ್ಟಿಗೆ ಸರ್!

ಸಂಗ್ರಹ: ಶರದ ಕುಲಕರ್ಣಿ, ಬೀದರ್